# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

# ನಂಜನಗೂಡು

**ಸಿ.ಸಿ ನಂ.1136-2020** **ಪಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಎನ್.ಎಂ.ಜೀವನ್‌ಕುಮಾರ್<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 19-04-2022. |

**ಪಾಟೀ ಸವಾಲುಃ ಶ್ರೀ ಆರ್. ಎಸ್.ಕೆ ವಕೀಲರಿಂದಃ**

ಆರೋಪಿ ನನ್ನ ಸ್ನೇಹಿತ. ಆರೋಪಿ 7-8 ವರ್ಷಗಳಿಂದ ನನಗೆ ಪರಿಚತರಿರುತ್ತಾರೆ, ಆರೋಪಿ ಮೊಬೈಲ್ ವ್ಯಾಪಾರ ಮಾಡುತ್ತಾರೆ. ಅವರಿಗೆ ಸ್ವಂತ ಅಂಗಡಿ ಇರುವುದಿಲ್ಲ. ಆರೋಪಿ ಸಿಂಧುವಳ್ಳಿ ಗ್ರಾಮದವರು. ನಾನು ಆರೋಪಿಗೆ ಜನವರಿ-2020 ರಲ್ಲಿ ಸಾಲ ನೀಡಿರುತ್ತೇನೆ. ಯಾವ ದಿನಾಂಕ ಎಂದು ಈಗ ನನಗೆ ನೆನಪಿಲ್ಲ. ಆರೋಪಿ ನಂಜನಗೂಡಿನ ಹುಲ್ಲಹಳ್ಳಿ ಸರ್ಕಲ್ ಬಳಿ ನನ್ನಿಂದ ಸದರಿ ಸಾಲ ಪಡೆದಿರುತ್ತಾರೆ. ಆರೋಪಿಯಿಂದ ಸದರಿ ಸಾಲದ ಬಾಬ್ತು ನಾನು ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿಲ್ಲ. ಏಕೆಂದರೆ ಆರೋಪಿ ನನ್ನ ಸ್ನೇಹಿತನಾದ್ದರಿಂದ ನಾನು ಆತನಿಂದ ಯಾವುದೇ ದಾಖಲೆ ಪಡೆದುಕೊಳ್ಳಲಿಲ್ಲ. ನಾನು ಆರೋಪಿಗೆ ರೂ.90,000/- ಸಾಲ ನೀಡಿರುತ್ತೇನೆ. ಆರೋಪಿಗೆ ನಾನು ಸದರಿ ಸಾಲವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ಆರೋಪಿಗೆ ರೂ.500/- ಮುಖಬೆಲೆಯ ನೋಟುಗಳಲ್ಲಿ ಸದರಿ ಸಾಲ ನೀಡಿರುತ್ತೇನೆ. ನಾನು ಪೈಂಟ್ ಅಂಗಡಿ ಇಟ್ಟುಕೊಂಡಿದ್ದೇನೆ ಹಾಗೂ ಪೈಂಟ್ ಕೆಲಸ ಮಾಡುತ್ತೇನೆ. ಈಗ ಒಂದು ವರ್ಷದ ಹಿಂದೆ ಅಂಗಡಿಯನ್ನು ಮುಚ್ಚಿದ್ದೇನೆ. ನಾನು ಸದರಿ ವ್ಯಾಪಾರ ನಡೆಸಲು ಪರವಾನಗಿಯನ್ನು ಕೂಡ ಪಡೆದುಕೊಂಡಿದ್ದು, ಅದು ನನ್ನ ಹೆಂಡತಿಯ ಹೆಸರಿನಲ್ಲಿ ಇದೆ.

2. ನನ್ನ ಮೊದಲನೆ ಚಿಕ್ಕಪ್ಪನ ಹೆಸರು ಲಿಂಗಪ್ಪಗೌಡ. ಆರೋಪಿಗೂ ನನ್ನ ಸದರಿ ಚಿಕ್ಕಪ್ಪನಿಗೂ ಪರಿಚರಿ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿ ಜನವರಿ-2020 ರ ಕೊನೆ ವಾರದಲ್ಲಿ ನಿಪಿ-1 ನ್ನು ನೀಡಿರುತ್ತಾರೆ. ನಿಪಿ-1 ಬ್ಯಾಂಕ್ ಅಫ್ ಬರೋಡ ಚೆಕ್ ಆಗಿರುತ್ತದೆ. ನನ್ನ ವಿರುದ್ಧ 3 ಚೆಕ್ ಬೌನ್ಸ್‌ಪ್ರಕರಣಗಳು ಇವೆ ಎಂದರೆ ಸರಿ. ನಿಪಿ-1 ನ್ನು ನಾನು ಮಾರ್ಚ್-2020 ರಲ್ಲಿ ಬ್ಯಾಂಕಿಗೆ

ಹಾಜರುಪಡಿಸಿರುತ್ತೇನೆ. ನಿಪಿ–1 ಮಾರ್ಚ್ ತಿಂಗಳಲ್ಲಿ ನಗದೀಕರಣಗೊಳ್ಳದೆ ವಾಪಸ್ಸು ಬಂದಾಗ ಆರೋಪಿ ನನ್ನನ್ನು ಭೇಟಿ ಮಾಡಿ ನಿಪಿ–1 ನ್ನು ಜೂನ್ ತಿಂಗಳಲ್ಲಿ ಬ್ಯಾಂಕಿಗೆ ಹಾಜರುಪಡಿಸುವಂತೆ ಕೇಳಿಕೊಂಡರು ಅದರಂತೆ ನಾನು ಜೂನ್ ತಿಂಗಳಲ್ಲಿ ಹಾಜರುಪಡಿಸಿರುತ್ತೇನೆ. ನಾನೇ ಸಾಲಗಾರನಾಗಿದ್ದು, ಆರೋಪಿಗೆ ಸಾಲ ನೀಡುವಷ್ಟು ಅರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ಆರೋಪಿ ನಿಪಿ–1 ನ್ನು ನನ್ನ ಚಿಕ್ಕಪ್ಪ ಲಿಂಗಪ್ಪಗೌಡರಿಗೆ ನೀಡಿದ್ದು, ನಾನು ಅದನ್ನು ದುರುಪಯೋಪಡಿಸಿಕೊಂಡು ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಹಾಗೂ ಆರೋಪಿ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನಿಂದ ಯಾವುದೇ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯವನ್ನು ಕೋರಿದ್ದು ಮುಂದೂಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**